# ಹರಿಕಥಾಮೃತಸಾರ - ೧೧

## ಧ್ಯಾನಪ್ರಕ್ರಿಯಾ ಸಂಧಿ

ಹರಿಕಥಾಮೃತಸಾರ ಗುರುಗಳ । ಕರುಣದಿಂದಾಪನಿತು ಪೇಳುವೆ ।
ಪರಮ ಭಗವದ್ಭಕ್ತರಿದನಾದರದಿ ಕೇಳುವುದು ॥

ಪಾದುಕೆಯ ಕಂಟಕ ಸಿಕತ ಮೊದ।ಲಾದವನುದಿನ ಬಾಧಿಸವು ಏ ।
ಕಾದಶೇಂದ್ರಿಯಗಳಲಿ ಬಿಡದೇ ಹೃಷೀಕಪನ ಮೂರ್ತಿ
ಸಾದರದಿ ನೆನೆವವನು ಏನಪ।ರಾಧಗಳು ಮಾಡಿದರು ಸರಿಯೆ ನಿ ।
ರೋಧಗೈಸವು ಮೋಕ್ಷಮಾರ್ಗಕೆ ದುರಿತರಾಶಿಗಳು ॥ ॥೧೧-೦೧॥

ಹಗಲ ನಂದಾದೀಪದಂದದಿ । ನಿಗಮವೇದ್ಯನ ಪೂಜಿಸುತ ಕೈ ।
ಮುಗಿದು ನಾಲ್ಕರೊಳೊಂದು ಪುರುಷಾರ್ಥವನು ಬೇಡದಲೆ ॥
ಜಗದುದರ ಕೊಟ್ಟುದನು ಭುಂಜಿಸು । ಮಗಮಡದಿ ಪ್ರಾಣೇಂದ್ರಿಯಾತ್ಮಾ ।
ದಿಗಳು ಭಗವದಧೀನವೆಂದಡಿಗಡಿಗೆ ನೆನವುತಿರು ॥ ॥೧೧-೦೨॥

ಅಸ್ವತಂತ್ರನು ಜೀವ ಹರಿ ಸರ್ವಸ್ವತಂತ್ರನು ನಿತ್ಯಸುಖಮಯ ।
ನಿಃಸ್ವಬದ್ಧಾಲ್ಪಜ್ಞಶಕ್ತ ಸದುಃಖಿ ನಿರ್ವಿಣ್ಣ ॥
ಹ್ರಸ್ವದೇಹಿ ಸನಾಥಜೀವನು । ವಿಶ್ವವ್ಯಾಪಕ ಕರ್ತೃ ಬ್ರಹ್ಮ ಸ ।
ರಸ್ವತೀಶಾದ್ಯಮರನುತ ಹರಿಯೆಂದು ಕೊಂಡಾಡು ॥ ॥೧೧-೦೩॥

ಮತ್ತೇ ವಿಶ್ವಾದ್ಯೆಂಟು ರೂಪ್ಗೊಂ।ಭತ್ತರಿಂದಲಿ ಪೆಚ್ಚಿಸಲು ಎ ।
ಪ್ಪತ್ತೆರಡು ರೂಪಗಳಹವು ಒಂದೊಂದೆ ಸಾಹಸ್ರ ॥
ಪೃಥಕ್ ಪೃಥಕು ನಾಡಿಗಳೊಳಗೆ ಸರ್ವೋತ್ತಮನ ತಿಳಿಯೆಂದು ಭೀಷ್ಮನು ।
ಬಿತ್ತರಿಸಿದನು ಧರ್ಮತನಯಗೆ ಶಾಂತಿಪರ್ವದಲಿ ॥ ॥೧೧-೦೪॥

ಎಂಟು ಪ್ರಕೃತಿಗಳೊಳಗೆ ವಿಶ್ವಾ।ದ್ಯೆಂಟು ರೂಪದಲಿದ್ದು ಭಕುತರ ।
ಕಂಟಕವ ಪರಿಹರಿಸುತಲಿ ಪಾಲಿಸುವ ಪ್ರತಿದಿನದಿ ॥
ನೆಂಟನಂದದಿ ಎಡಬಿಡದೆ ವೈಕುಂಠರಮಣನು ತನ್ನವರ ನಿ ।
ಷ್ಕಂಟಕ ಸುಮಾರ್ಗದಲಿ ನಡೆಸುವ ದುರ್ಜನರ ಬಡಿವ ॥ ॥೧೧-೦೫॥

ಸ್ವರಮಣನು ಶಕ್ತ್ಯಾದಿರೂಪದಿ । ಕರಣಮಾನಿಗಳೊಳಗೆ ನೆಲೆಸಿ ।
ದ್ದರವಿದೂರನು ಸ್ಥೂಲವಿಷಯಗಳುಂಡುಣಿಪ ನಿತ್ಯ ॥
ಅರಿಯದಲೆ ನಾನುಂಬೆನೆಂಬುವ । ನಿರಯಗಳನುಂಬುವನು ನಿಶ್ಚಯ ।
ಮರಳಿ ಮರಳಿ ಭವಾಟವಿಯ ಸಂಚರಿಸಿ ಬಳಲುವನು ॥ ॥೧೧-೦೬॥

ಸುರುಚಿ ರುಚಿರ ಸುಗಂಧ ಶುಚಿಯೆಂ।ದಿರುತಿಹನು ಷಡ್ರಸಗಳೊಳು ಹ ।
ನ್ನೆರಡು ರೂಪದಲಿಪ್ಪ ಶ್ರೀ ಭೂ ದುರ್ಗೆಯರ ಸಹಿತ ॥
ಸ್ವರಮಣನು ಎಪ್ಪತ್ತೆರಡು ಸಾ।ವಿರ ಸಮೀರನ ರೂಪದೊಳಗಿ ।
ದ್ದುರುಪರಾಕ್ರಮಕರ್ತೃ ಎನಿಸುವ ನಾಡಿಗಳೊಳಗಿದ್ದು ॥ ॥೧೧-೦೭॥

ನಿನ್ನ ಸರ್ವತ್ರದಲಿ ನೆನೆವವ।ರನ್ಯ ಕರ್ಮವ ಮಾಡಿದರು ಸರಿ ।
ಪುಣ್ಯ ಕರ್ಮಗಳೆನಿಸುವುವು ಸಂದೇಹವಿನಿತಿಲ್ಲ ॥
ನಿನ್ನ ಸ್ಮರಿಸದೆ ಸ್ನಾನ ಜಪ ಹೋ।ಮಾನ್ನ ವಸ್ತ್ರ ಗಜಾಶ್ವ ಭೂಧನ ।
ಧಾನ್ಯ ಮೊದಲಾದಖಿಳ ಧರ್ಮವ ಮಾಡಿ ಫಲವೇನು ॥ ॥೧೧-೦೮॥

ಇಷ್ಟ ಭೋಗ್ಯ ಪದಾರ್ಥದೊಳು ಶಿಪಿ।ವಿಷ್ಟನಾಮದಿ ಸರ್ವಜೀವರ ।
ತುಷ್ಟಿ ಬಡಿಸುವ ದಿನದಿನದಿ ಸಂತುಷ್ಟ ತಾನಾಗಿ ॥
ಕೋಷ್ಟದೊಳು ನೆಲಸಿದ್ದು ರಸಮಯ । ಪುಷ್ಟಿಯೈದಿಸುತಿಂದ್ರಿಯಗಳೊಳು ।
ಪ್ರೇಷ್ಠನಾಗಿದ್ದೆಲ್ಲ ವಿಷಯಗಳುಂಬ ತಿಳಿಸದಲೆ ॥ ॥೧೧-೦೯॥

ಕಾರಕಾಹ್ವಯ ಜ್ಞಾನ ಕರ್ಮ।ಪ್ರೇರಕನು ತಾನಾಗಿ ಕ್ರಿಯೆಗಳ ।
ತೋರುವನು ಕರ್ಮೇಂದ್ರಿಯಾಧಿಪರೊಳಗೆ ನೆಲಸಿದ್ದು ॥
ಮೂರು ಗುಣಮಯ ದ್ರವ್ಯಗ ತದಾ।ಕಾರ ತನ್ನಾಮದಲಿ ಕರೆಸುವ ।
ತೋರಿಕೊಳ್ಳದೆ ಜನರ ಮೋಹಿಪ ಮೋಹಕಲ್ಪಕನು ॥ ॥೧೧-೧೦॥

ದ್ರವ್ಯನೇನಿಸುವ ಭೂತ ಮಾತ್ರದೊ।ಳವ್ಯಯನು ಕರ್ಮೇಂದ್ರಿಯಗಳೊಳು ।
ಭವ್ಯ ಸತ್ಕ್ರಿಯನೆನಿಪ ಜ್ಞಾನೇಂದ್ರಿಯಗಳೊಳಗಿದ್ದು ॥
ಸ್ತವ್ಯ ಕಾರಕನೆನಿಸಿ ಸುಖಮಯ । ಸೇವ್ಯ ಸೇವಕನೆನಿಸಿ ಜಗದೊಳು ।
ಹವ್ಯವಾಹನನರಣಿಯೊಳಗಿಪ್ಪಂತೆ ಇರುತಿಪ್ಪ ॥ ॥೧೧-೧೧॥

ಮನವೆ ಮೊದಲಾದಿಂದ್ರಿಯಗಳೊಳ।ಗನಿಲದೇವನು ಶುಚಿಯೆನಿಸಿಕೊಂ ।
ಡನವರತ ನೆಲಸಿಪ್ಪ ಶುಚಿಷದ್ಧ್ಯೋತನೆಂದೆನಿಸಿ ॥
ತನುವಿನೊಳಗಿಪ್ಪನು ಸದಾ ವಾ।ಮನ ಹೃಷಿಕೇಶಾಖ್ಯರೂಪದ ।
ಲನುಭವಕೆ ತಂದೀವ ವಿಷಯಜ ಸುಖವ ಜೀವರಿಗೆ ॥ ॥೧೧-೧೨॥

ಪ್ರೇರಕ ಪ್ರೇರ್ಯರೊಳು ಪ್ರೇರ್ಯ।ಪ್ರೇರಕನು ತಾನಾಗಿ ಹರಿ ನಿ ।
ರ್ವೈರದಿಂದ ಪ್ರವರ್ತಿಸುವ ತನ್ನಾಮರೂಪದಲಿ ॥
ತೋರಿಕೊಳ್ಳದೆ ಸರ್ವರೊಳು ಭಾ।ಗೀರಥೀಜನಕನು ಸಕಲ ವ್ಯಾ ।
ಪಾರಗಳ ತಾ ಮಾಡಿ ಮಾಡಿಸಿ ನೋಡಿ ನಗುತಿಪ್ಪ ॥ ॥೧೧-೧೩॥

ಹರಿಯೆ ಮುಖ್ಯನಿಯಾಮಕನು ಎಂದರಿದು ಪುಣ್ಯಾಪುಣ್ಯ ಹರುಷಾ ।
ಮರುಷ ಲಾಭಾಲಾಭ ಸುಖದುಃಖಾದಿ ದ್ವಂದ್ವಗಳ ॥
ನಿರುತ ಆವನಂಘ್ರಿಗೆ ಸಮರ್ಪಿಸಿ । ನರಕಭೂಸ್ವರ್ಗಾಪವರ್ಗದಿ ।
ಕರಣನಿಯಾಮಕನ ಸರ್ವತ್ರದಲಿ ನೆನೆವುತಿರು ॥ ॥೧೧-೧೪॥

ಮಾಣವಕ ತತ್ವಫಲಗಳನುಸಂಧಾನವಿಲ್ಲದೆ ಕರ್ಮಗಳ ಸ್ವೇ ।
ಚ್ಛಾನುಸಾರದಿ ಮಾಡಿ ಮೋದಿಸುವಂತೆ ಪ್ರತಿದಿನದಿ ॥
ಜ್ಞಾನಪೂರ್ವಕ ವಿಧಿನಿಷೇಧಗಳೇನು ನೋಡದೆ ಮಾಡು ಕರ್ಮಪ್ರ ।
ಧಾನ ಪುರುಷೇಶನಲಿ ಭಕುತಿಯ ಬೇಡುಕೊಂಡಾಡು ॥ ॥೧೧-೧೫॥

ಹಾನಿವೃದ್ಧಿ ಜಯಾಪಜಯಗಳು ಏನು ಕೊಟ್ಟುದ ಭುಂಜಿಸುತ ಲ ।
ಕ್ಷ್ಮೀನಿವಾಸನ ಕರುಣವನೆ ಸಂಪಾದಿಸನುದಿನದಿ ॥
ಜ್ಞಾನಸುಖಮಯ ತನ್ನವರ ಪರಮಾನುರಾಗದಿ ಸಂತೈಪ ದೇ ।
ಹಾನುಬಂಧಿಗಳಂತೆ ಒಳಹೊರಗಿದ್ದು ಕರುಣಾಳು ॥ ॥೧೧-೧೬॥

ಆ ಪರಮ ಸಕಲೇಂದ್ರಿಯಗಳೊಳು । ವ್ಯಾಪಕನು ತಾನಾಗಿ ವಿಷಯವ ।
ತಾ ಪರಿಗ್ರಹಿಸುವನು ತಿಳಿಸದೆ ಸರ್ವಜೀವರೊಳು ॥
ಪಾಪರಹಿತ ಪುರಾಣಪುರುಷ ಸಮೀಪದಲಿ ನೆಲೆಸಿದ್ದು ನಾನಾ ।
ರೂಪಧಾರಕ ತೋರಿಕೊಳ್ಳದೆ ಕರ್ಮಗಳ ಮಾಳ್ಪ ॥ ॥೧೧-೧೭॥

ಖೇಚರರು ಭೂಚರರು ವಾರಿನಿಶಾಚರರೊಳಿದ್ದವರ ಕರ್ಮಗ ।
ಳಾಚರಿಸುವನು ಘನಮಹಿಮ ಪರಮಾಲ್ಪನೋಪಾದಿ ॥
ಗೋಚರಿಸನು ಬಹುಪ್ರಕಾರಾಲೋಚನೆಯ ಮಾಡಿದರು ಮನಸಿಗೆ ।
ಕೀಚಕಾರಿಪ್ರಿಯ ಕವಿಜನಗೇಯ ಮಹರಾಯ ॥ ॥೧೧-೧೮॥

ಒಂದೇ ಗೋತ್ರ ಪ್ರವರ ಸಂಧ್ಯಾವಂದನೆಗಳು ಮಾಡಿ ಪ್ರಾಂತಕೆ ।
ತಂದೆ ತನಯರು ಬೇರೆ ತಮ್ಮಯ ಪೆಸರುಗೊಂಬಂತೆ ॥
ಒಂದೆ ದೇಹದೊಳಿದ್ದು ನಿಂದ್ಯಾನಿಂದ್ಯ ಕರ್ಮವ ಮಾಡಿ ಮಾಡಿಸಿ ।
ಇಂದಿರೇಶನು ಸರ್ವಜೀವರೊಳೀಶನೆನಿಸುವನು ॥ ॥೧೧-೧೯॥

ಕಿಟ್ಟಗಟ್ಟಿದ ಲೋಹ ಪಾವಕ । ಸುಟ್ಟು ಪಿಂಗಡ ಮಾಡುವಂತೆ ಘ ।
ರಟ್ಟ ವ್ರೀಹಿಗಳೊಳಿಪ್ಪ ತಂಡುಲ ಕಡೆಗೆ ತೆಗೆವಂತೆ ॥
ವಿಠ್ಠಲಾ ಎಂದೊಮ್ಮೆ ಮೈಮರೆದಟ್ಟಹಾಸದಿ ಕರೆಯೆ ದುರಿತಗ ।
ಳಟ್ಟುಳಿಯ ಬಿಡಿಸಿ ಆವನ ತನ್ನೊಳಗಿಟ್ಟು ಸಲಹುವನು ॥ ॥೧೧-೨೦॥

ಜಲಧಿಯೊಳು ಸ್ವೇಚ್ಛಾನುಸಾರದಿ । ಜಲಚರ ಪ್ರಾಣಿಗಳು ತತ್ತತ್ ।
ಸ್ಥಳಗಳಲಿ ಸಂತೋಷಬಡುತಲಿ ಸಂಚರಿಸುವಂತೆ ॥
ನಳಿನನಾಭನೊಳಜ್ಜ ಭವ ಮುಖ್ಯೋಳಲುರಿಗ ಮೃಗಣ್ಣ ಮೊದಲಾ ।
ದ್ಗಲವು ಜೀವರಗಣವು ವರ್ತಿಸುತಿಹದು ನಿತ್ಯದಲಿ ॥ ||೧೧-೨೧||

ವಾಸುದೇವನು ಒಳಹೊರಗೆ ಅವಕಾಶದನು (ಆಭಾಸಕನು) ತಾನಾಗಿ ಬಿಂಬಪ್ರ ।
ಕಾಶಿಸುವ ತದ್ರೂಪ ತನ್ನಾಮದಲಿ ಸರ್ವತ್ರ ॥
ಈ ಸಮನ್ವಯವೆಂದೆನಿಪ ಸದುಪಾಸನವ ಗೈವವನು ಮೋಕ್ಷಾ ।
ಪೇಕ್ಷಿಗಳೊಳುತ್ತಮನು ಜೀವನ್ಮುಕ್ತನವನಿಯೊಳು ॥ ||೧೧-೨೨||

ಭೋಗ್ಯವಸ್ತುಗಳೊಳಗೆ ಯೋಗ್ಯಾಯೋಗ್ಯರಸಗಳನರಿತು ಯೋಗ್ಯಾ ।
ಯೋಗ್ಯರಲಿ ನೆಲೆಸಿಪ್ಪ ಹರಿಗೆ ಸಮರ್ಪಿಸನುದಿನದಿ ॥
ಭಾಗ್ಯ ಬಡತನ ಬರಲು ಹಿಗ್ಗದೆ । ಕುಗ್ಗಿ ಸೋರಗದೆ ಸದ್ಭಕುತಿ ವೈ ।
ರಾಗ್ಯಗಳನೇ ಮಾಡು ನೀ ನಿರ್ಭಾಗ್ಯನೆನಿಸದಲಿ ॥ ||೧೧-೨೩||

ಸ್ಥಲಜಲಾದ್ರಿಗಳಲ್ಲಿ ಜನಿಸುವ । ಫಲಸುಪುಷ್ಪಜಗಂಧರಸ ಶ್ರೀ ।
ತುಳಸಿ ಮೊದಲಾದಖಿಳ ಪೂಜಾಸಾಧನ ಪದಾರ್ಥ ॥
ಹಲವು ಬಗೆಯಿಂದರ್ಪಿಸುತ ಬಾಂಬೊಳೆಯಜನಕಗೆ ನಿತ್ಯನಿತ್ಯದಿ ।
ತಿಳಿವುದಿದು ವ್ಯತಿರೇಕ ಪೂಜೆಗಳೆಂದು ಕೋವಿದರು ॥ ||೧೧-೨೪||

ಶ್ರೀಕರನ ಸರ್ವತ್ರದಲಿ ಅವಲೋಕಿಸುತ ಗುಣರೂಪಕ್ರಿಯ ವ್ಯತಿ ।
ರೇಕ ತಿಳಿಯದಲನ್ವಯಿಸು ಬಿಂಬನಲಿ ಮರೆಯದಲಿ ॥
ಸ್ವೀಕರಿಸುವನು ಕರುಣದಿಂದ ನಿರಾಕರಿಸದೆ ಕೃಪಾಳು ಭಕ್ತರ ।
ಶೋಕಗಳ ಪರಿಹರಿಸಿ ಸುಖಪಿತ್ತನವರತ ಪೊರೆವ ॥ ||೧೧-೨೫||

ಇನಿತು ವ್ಯತಿರೇಕಾನ್ವಯಗಳೆಂದೆನಿಪ ಪೂಜಾವಿಧಿಗಳನೆ ತಿಳಿ ।
ದನಿಮಿಷೇಶನ ತೃಪ್ತಿಬಡಿಸುತಲಿರು ನಿರಂತರದಿ ॥
ಘನಮಹಿಮ ಕೈಕೊಂಡು ಸ್ಥಿತಿಮೃತಿ । ಜನುಮಗಳ ಪರಿಹರಿಸಿ ಸೇವಕ ।
ಜನರೊಳಿಟ್ಟಾನಂದಬಡಿಸುವ ಭಕ್ತವತ್ಸಲನು ॥ ||೧೧-೨೬||

ಜಲಜನಾಭನಿಗೆರಡು ಪ್ರತಿಮೆಗಳಿಳೆಯೊಳಗೆ ಜಡಚೇತನಾತ್ಮಕ ।
ಚಲದೊಳಿರ್ಬಗೆ ಸ್ತ್ರೀಪುರುಷ ಭೇದದಲಿ ಜಡದೊಳಗೆ ॥
ತಿಳಿವುದಾಹಿತಪ್ರತಿಮೇ ಸಹಜಾಚಲಗಳೆಂದಿರ್ಬಗೆ ಪ್ರತೀಕದಿ ।
ಲಲಿತ ಪಂಚತ್ರಯ ಸುಗೋಳಕವರಿತು ಭಜಿಸುತಿರು ॥ ||೧೧-೨೭||

ವಾರಿಜಾಸನ ವಾಯು ವೀಂದ್ರ ಉಮಾರಮಣ ನಾಕೇಶ ಸ್ಮರಹಂ ।
ಕಾರಿಕಪ್ರಾಣಾದಿಗಳು ಪುರುಷರ ಕಳೇವರದಿ ॥
ತೋರಿಕೊಳದನಿರುದ್ಧ ದೋಷವಿದೂರ ನಾರಾಯಣನ ರೂಪ ಶ ।
ರೀರಮಾನಿಗಳಾಗಿ ಭಜಿಸುತ ಸುಖವ ಕೊಡುತಿಹರು ॥ ||೧೧-೨೮||

ಸಿರಿ ಸರಸ್ವತಿ ಭಾರತೀ ಸೌಪರಣಿ ವಾರುಣಿ ಪಾರ್ವತೀಮುಖ ।
ರಿರುತಿಹರು ಸ್ತ್ರೀಯರೊಳಗಭಿಮಾನಿಗಳು ತಾವೆನಿಸಿ ॥
ಅರುಣವರ್ಣನಿಭಾಂಗ ಶ್ರೀ ಸಂಕರುಷಣ ಪ್ರದ್ಯುಮ್ನ ರೂಪಗ ।
ಳಿರುಳು ಹಗಲು ಉಪಾಸನವ ಗೈವುತಲಿಹಮೋದಿಪರು ॥ ||೧೧-೨೯||

ಕೃತಪ್ರತೀಕದಿ ಟಂಕಿ ಭಾರ್ಗವ । ಹುತವಹಾನಿಲ ಮುಖ್ಯ ದಿವಿಜರು ।
ತುತಿಸಿಕೊಳುತಭಿಮಾನಿಗಳು ತಾವಾಗಿ ನೆಲೆಸಿದ್ದು ॥
ಪ್ರತಿದಿವಸ ಶ್ರೀ ತುಲಸಿ ಗಂಧಾಕ್ಷತೆ ಕುಸುಮ ಫಲ ದೀಪ ಪಂಚಾ ।
ಮೃತದಿ ಪೂಜಿಪಭಕುತರಿಗೆಕೊಡುತಿಹರು ಪುರುಷಾರ್ಥ ॥ ||೧೧-೩೦||

ನಗಗಳಭಿಮಾನಿಗಳೆನಿಪ ಸುರರುಗಳು ಸಹಜಾಚಲಗಳಿಗೆ ಮಾ ।
ನಿಗಳೆನಿಸಿ ಶ್ರೀವಾಸುದೇವನ ಪೂಜಿಸುತಲಿಹರು ॥
ಸ್ವಗತಭೇದವಿವರ್ಜಿತನ ನಾಲ್ಬಗೆ ಪ್ರತೀಕದಿ ತಿಳಿದು ಪೂಜಿಸಿ ।
ವಿಗತ ಸಂಸಾರಾಬ್ಧಿ ದಾಟಿಸಿ ಮುಕ್ತರನು ಮಾಳ್ಪ ॥ ||೧೧-೩೧||

ಆವ ಕ್ಷೇತ್ರಕೆ ಪೋದರೇನಿನ್ನಾವ ತೀರ್ಥದಿ ಮುಳುಗಲೇನಿ ।
ನ್ನಾವ ಜಪತಪ ಹೋಮ ದಾನವ ಮಾಡಿ ಫಲವೇನು ॥
ಶ್ರೀವರ ಜಗನ್ನಾಥ ವಿಠಲನ । ಈ ವಿಧದಿ ಜಂಗಮ ಸ್ಥಾವರ ।
ಜೀವರೊಳು ಪರಿಪೂರ್ಣನೆಂದರಿಯದಿಹ ಮಾನವರು ॥ ||೧೧-೩೨||

ooooooooooooooooooooooooooooooooooooooooo